ಆವತ್ತು ರಾತ್ರಿ ಬಹಳ ಹೊತ್ತು ನಿದ್ದೆ ಬಾರದೆ ಗಂಡ ಹೆಂಡತಿ ಇಬ್ಬರೂ ಹೊರಳಾಡುತ್ತಿದ್ದರು. ''ಹೆರಿಗೆಗೆ ಮಗಳು ಬಂದಾಗ ಅಗತ್ಯಕ್ಕೆ ಬೇಕಾದಷ್ಟು ಹಾಲುಕೊಡುವುದಕ್ಕಾಗಿಯೇ ನಮ್ಮ ದನ ಕರು ಹಾಕಲುತಯಾರಾಗಿದೆ ಅಂತ ಖುಷಿಯಲ್ಲಿದ್ದೆ ನಾನು. ಈಗ ನೋಡಿ ಸಮಸ್ಯೆ...'' ಅಂದರು ಗೌರಿಯಮ್ಮ. ''ಸಮಸ್ಯೆ ಏನಿಲ್ಲ, ಮಾರ್ಗ ಉಂಟು. ನಾಳೆ ಬೆಳಗ್ಗೆ ಸ್ವಾಮೀಜಿಯವರ ಗೋಶಾಲೆಯಲ್ಲಿ ಕೇಳಿ ಬರ್ತೇನೆ, ನೀನು ಸುಮ್ಮನೆ ಚಿಂತೆ ಬಿಟ್ಟು ಮಲಗಿಕೋ'' ಅಂದರು ಮೂರ್ತಿ.

★★★

ಮರುದಿನ ಬೆಳ್ಳಂಬೆಳಗ್ಗೆ ''ಇಲ್ನೋಡಿ ಅಂದ್ರೆ... ಕೊಟ್ಟಿಗೆಯಲ್ಲಿ ದನ ಇಲ್ಲ!...'' ಹೆಂಡತಿಯ ಚೀತ್ಕಾರಕ್ಕೆ ಎಚ್ಚೆತ್ತ ರಾಯರು ಕೊಟ್ಟಿಗೆಗೆ ಧಾವಿಸಿದರು. ದನವನ್ನು ಹುಡುಕುತ್ತ ಮನೆಯ ಪರಿಸರ, ಕೊಟ್ಟಿಗೆಯ ಹಿಂಭಾಗ, ಗದ್ದೆ, ತೋಟ ನೆರೆಕರೆಯವರ ತೋಟಗದ್ದೆ – ಎಲ್ಲಾ ಹುಡುಕಿದರೂ ದನ ಕಾಣಿಸಲಿಲ್ಲ. ಬೊಬ್ಬೆ ಕೇಳಿ ಗಿರಿಯನೂ ಓಡಿ ಬಂದ. ಇಬ್ಬರೂ ಸೇರಿ ಅರ್ಧ ಮೈಲು ವಿಸ್ತೀರ್ಣದಲ್ಲೆಲ್ಲ ಹುಡುಕಿದರೂ ದನ ಪತ್ತೆಯಾಗಲೇ ಇಲ್ಲ. ಊರವರ ಬಾಯಿಯಿಂದ ಮತ್ತೂ ಹಲವು ದನಗಳು ಕಾಣೆಯಾದ ಸುದ್ದಿ ಸಿಕ್ಕಿತು. ಗೋಪಾಲನಿಗೆ ಹೇಳಿ ಕಂಪ್ಲೇಂಟ್ ಕೊಡುವ ಎಂದ ಗಿರಿಯ. ಇಬ್ಬರೂ ಪೊಲೀಸ್ ಸ್ಟೇಶನ್ನಿಗೆ ಧಾವಿಸಿದರು.

ಪೊಲೀಸ್ ಸ್ಟೇಶನ್ ಎದುರು ಹತ್ತಾರು ಮಂದಿ ಗಂಡಸರೂ ಹೆಂಗಸರೂ ನಿಂತಿದ್ದರು. ''ಹಾಲು ಕರೆಯುತ್ತಿದ್ದ ದನ... ಹೇಗೆ ಕಡಿದು ತಿನ್ನಲು ಮನಸ್ಸು ಬರುತ್ತದೋ'' ಮಹಿಳೆಯೊಬ್ಬರು ರೋದಿಸುತ್ತಿದ್ದರು. ''ಹಟ್ಟಿಗೆ ಬೀಗ ಹಾಕಿದ್ದೆವು. ರಾಡ್ ಹಾಕಿ ಬೀಗ ಮುರಿದು ದನವನ್ನು ಹೊಡೆದುಕೊಂಡು ಹೋಗಿದ್ದಾರೆ. ಕಾಲ ಕೆಟ್ಟಿತು'' ತಲೆಚಚ್ಚಿಕೊಳ್ಳುತ್ತಿದ್ದರು ಇನ್ನೊಬ್ಬ.

''ಯಾರದ್ದೆಲ್ಲ ಜಾನುವಾರು ಕಳವಾಗಿರೋದು? ಬನ್ನಿ, ಇಲ್ಲಿ ಕಂಪ್ಲೇಂಟ್ ಬರೆಸಿ'' ಕಾನ್‌ಸ್ಟೆಬಲ್ ಒಬ್ಬರು ಕೂಗಿ ಹೇಳಿದರು.

''ಏನು ಹೆಸರು?'' ಮೊದಲು ಬಂದ ಮೂರ್ತಿರಾಯರನ್ನು ಕೇಳಿದರು.

''ನನ್ನದಾ ದನದ್ದಾ?''

ಕೋಪಗೊಂಡ ಪೊಲೀಸು ನಖಶಿಖಾಂತ ಇವರನ್ನೊಮ್ಮೆ ನೋಡಿದರು. ಪಾಪ ವೃದ್ಧರು ಅನ್ನಿಸಿತ್ತೋ ಏನೋ, ಮುಂದುವರೆಸಿದರು.

''ನಿಮ್ಮದು.''

''ಮೂರ್ತಿ.''

''ವರ್ಷ ಎಷ್ಟು?''

''ಅರವತ್ತೆರಡು.''

''ದನ ಯಾವ ಬಣ್ಣದ್ದು? ಹೇಗೆ ಗುರ್ತು ಹಿಡಿಯಬಹುದು?''

''ಕಪ್ಪು ಬಣ್ಣದ ಗಬ್ಬದ ದನ.''

''ದನ ಎಲ್ಲಿ ಕಟ್ಟಿದ್ದು? ಎಲ್ಲಿಂದ ಕದ್ದುಹೋಗಿದೆ?''

''ಕಟ್ಟಿದ್ದಲ್ಲ, ಕೊಟ್ಟಿಗೆಯೊಳಗೆ ಬಿಟ್ಟದ್ದು. ನೆರೆಕರೆಯಲ್ಲಿ ಒಬ್ಬರು ಜಾನುವಾರುಗಳನ್ನು ಹಗ್ಗ ಕಟ್ಟದೆ ಹಟ್ಟಿಯೊಳಗೆ ಬಿಡಿ, ಕಳ್ಳರು ಹಗ್ಗ ಕಟ್ಟಲು ಬಂದರೆ ಹಾಯುತ್ತವೆ. ಸುಲಭದಲ್ಲಿ ಹಗ್ಗ ಕಟ್ಟಲು ಬಿಡುವುದಿಲ್ಲ ಅಂದಿದ್ದರು'' ವಿವರಿಸಿದರು ಮೂರ್ತಿ.

''ಓಹೋ ತುಂಬ ಸಂಶೋಧನೆ ಮಾಡಿಕೊಂಡಿದ್ದೀರಿ, ಆದರೂ ದನ ಕದ್ದು ಹೋಯಿತು'' ಪೇದೆ ಬಾಯಗಲಿಸಿ ನಕ್ಕರು.

''ನಿಮ್ಮ ಹೆಸರು, ವಯಸ್ಸು, ಕಂಪ್ಲೇಂಟು ಬರೆದಿದ್ದೀನಿ. ವಿಳಾಸ, ಫೋನ್ ನಂಬ್ರ ಬರೆದು ಕೆಳಗಡೆ